ತಾರೀಖು 9ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3772.—ರೆ. 1293, ಹಿರಿಯೂರು ತಾಲ್ಲೂಕಿನ, ಹಿರಿಯೂರು ಮತ್ತು ಜವನಗೊಂಡನಹಳ್ಳಿ ಹೋಬಳಿಗಳಲ್ಲಿರುವ ಈ ಕೆಳಗೆ ಕಂಡ ಗ್ರಾಮಗಳ ವರ್ಗಾವರ್ಗಿಯು ಗವರ್ನ್‌ಮೆಂಟಿನವರು ಮಂಜೂರ್ಮಾಡಿರುತ್ತಾರೆ:—

ಗ್ರಾಮ.	ವರ್ಗವಾಡಿರುವ ಹೋಬಳಿ.
ಅನೆಸಿದ್ರಿ (ಹಿರಿಯೂರು ಹೋಬಳಿ)	ಜವನಗೊಂಡನಹಳ್ಳಿ
ಆದಿವಾಲ (ಜವನಗೊಂಡನಹಳ್ಳಿ ಹೋಬಳಿ) . .	ಹಿರಿಯೂರು

ತಾರೀಖು 17ನೇ ಅಕ್ಟೋಬರ್ 1896.

ನಂ. 3886.—ರೆ. ಫೈ. 55.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕು ಅಮಲ್ದಾರ್ ವಿ. ಕೃಷ್ಣರಾಯರಿಗೆ, 1896ನೇ ಸೆಪ್ಟಂಬರ್ 15ನೇ ಮಕ್ತುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 24ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರು.

ನಂ. 3937.—ರೆ. 1354, ಸ್ರ 1888ನೇ ಇಸವಿಯ IVನೇ ರೆಗ್ಯುಲೇಷನಾದ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರ ಅನುಸರಿಸಿ, ನಂಜನಗೂಡು ತಾಲ್ಲೂಕಿನಲ್ಲಿರುವ ಕನ್ಯಾನೂರು, ಹಟ್ವಾಲಾ, ಮಂದನಹಳ್ಳಿ, ಮಚ್ಚೂರು ಮತ್ತು ಕಲ್ಲಹಳ್ಳಿ ಸರ್ವ ಇನಾಂ ಗ್ರಾಮಗಳಿಗೆ ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳನ್ನ ಲಗಾವ್ ಮಾಡುವ ಬಗ್ಗೆ ಮೈಸೂರ್ ಗವರ್ನ್‌ಮೆಂಟಿನವರು ಆಜ್ಞಾಪಿಸಿರುತ್ತಾರೆ.

ನಂ. 3940.—ರೆ. ಫೈ. 33—96, ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಹೆ. ಶ್ರೀನಿವಾಸರಾಯರಿಗೆ, 1896ನೇ ಸೆಪ್ಟಂಬರ್ 5ನೇ ಮಕ್ತುಂ 2558—ರೆ. ಫೈ. 33—96 ಮತ್ತು ಸೆಪ್ಟಂಬರ್ 14ನೇ ಮಕ್ತುಂ 2893—ರೆ. ಫೈ. 33—96ನೇ ನಂಬರುಗಳ ಗವರ್ನ್‌ಮೆಂಟ್ ಇಸ್ತಿಹಾರ್ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಎರಡು ತಿಂಗಳ ಪ್ರಿವಿಲೀಜ್ ರಜಾ ಇನ್ನೂ ಐದು ದಿನಗಳ ವರಿವಿಗೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷ್ಣ.

ಕ್ಯಾಂಪ್: ನಂ. 68. ತಾರೀಖು 21ನೇ ಅಕ್ಟೋಬರ್ 1896, ಮೊಕ್ಕಾಂ ಮೈಸೂರ್.

ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಸುಬ್ರಾಯರ ಛತ್ರಕ್ಕೆ ಈ ಕೆಳಗೆ ನಮೂದಿಸುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ:—

(1) ಕಿಕ್ಕೇರಿ ಶಾನುಭೋಗ ಸೀತಾರಾಮಯ್ಯನವರು.
(2) ಕಿಕ್ಕೇರಿಯಲ್ಲಿರುವ ಮುಷಿ ರಾಮಯ್ಯನವರ ಮಕ್ಕಳು ತಮ್ಮಯ್ಯನವರು.
(3) ಕೃಷ್ಣರಾಜಪೇಟೆ ರಂಗಯ್ಯಂಗಾರ್ರು.

ಕ್ಯಾಂ. ನಂ. 73. ತಾರೀಖು 2ನೇ ನವಂಬರ್ 1896ನೇ ಇಸವಿ, ಮೈಸೂರು.

ಯಡತೊರೆ ಕನಬಾದಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಛತ್ರ ದೇವಸ್ಥಾನಗಳಿಗೆ ಮೊಕ್ತರರು ಆಗಿದ್ದ ಧರ್ಮದರ್ಶಿಗಳ ಪೈಕಿ ಶಿರಸ್ತೇದಾರ್ ನಂಜುಂಡಯ್ಯನವರು ಹಾಲಿ ಸ್ಥಳದಲ್ಲಿ ಇಲ್ಲದೆ ಇರುವದ್ದರಿಂದ ಅವರಿಗೆ ಬದಲಾಗಿ ಹಾಸ್ಪಿಟಲ್ ಅಸಿಸ್ಟೆಂಟ್ ಎಂ. ನಂಜುಂಡಯ್ಯನವರನ್ನ ಧರ್ಮದರ್ಶಿಯಾಗಿ ನೇಮಿಸಿ ಇದೆ.

ಪಿ. ಶ್ರೀನಿವಾಸಾಚಾರ್ರು,
ಮುಜರಾಯಿ ಸೂಪರ್‌ಟೆಂಡೆಂಟ್ ಮತ್ತು ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ಮೈಸೂರು ಫೈದಲ್ ಫೂಜಿನ 3ನೇ ಪಟೂಲಮಿನಲ್ಲಿ 1896ನೇ ಅಕ್ಟೋಬರ್ ಗುರ್ರೇ ಲಾಗಾಯತು ಈ ಕೆಳಗೆ ಕಂಡ ಬಡ್ತಿಯು ಮಾಡಲ್ಪಟ್ಟಿದೆ:—

ವೆರ್ಷ ಮೇಲೆ ಕೆಲಸದಿಂದ ನಿವೃತ್ತರಾದ ಸುಬೇದಾರ್ ಸಯ್ಯದ ಹುಸೇನಯವರಿಗೆ ಬದಲಾಗಿ ಸಬ್ದರ್‌ಹುಸೇನಯವರು 1ನೇ ಗ್ರೇಡ್ ಜವಾದಾರಿಯಿಂದ 2ನೇ ಗ್ರೇಡ್ ಸುಬೇದಾರಿಗೆ.

ಹುಕುಂ ಬಮೋಜೀಬ್,
ಪಿ. ಎಚ್. ಮೆಕ್ಕಿಟ್ಯೈರ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಸೆಕ್ರಿಟರಿ.